ISSN : 2581-7728
Tumbe International e-Magazine
A Multilanguage Magazine
Issue-1
Volume-5
Jan-June: 2022

# ಜಯಮಂಗಲಿ ನದಿ

**ಭೂಮಿಕ ಆರ್**
U11GT21S0212
ಬಿಎಸ್ಸಿ ಮೊದಲನೇ ವರ್ಷ, ದ್ವಿತೀಯ ಸೆಮಿಸ್ಟರ್
ಸರ್ಕಾರಿ ಪ್ರಥಮ ದರ್ಜೆ ಕಾಲೇಜು ತುಮಕೂರು -572104
bhuoomikar@gmail.com Ph.no: 8088294520

ಜಯಮಂಗಳ ನದಿ ಎಂಬುದು ತುಮಕೂರು ಜಿಲ್ಲೆ, ಚನ್ನಸಾಗರ ಎಂಬ ಗ್ರಾಮದ ಹತ್ತಿರವಿದ್ದು, ಇದು ಇದುವರೆಗೂ ಎಂದರೆ ಮೂವತ್ತೈದು ವರ್ಷಗಳಿಂದ ಇದರಲ್ಲಿ ಯಾವುದೇ ನೀರು ತುಂಬಿರಲಲ್ಲ. ಇದನ್ನು ಮೂವತ್ತೈದು ವರ್ಷಗಳಿಂದ ಬರಡು ನಾದಿನ ಕಳೆದು ಹೋದ ನದಿಗಳು ಅಂತಲೇ ಇವುಗಳನ್ನು ಗುರುತಿಸಲಾಗಿತ್ತು. ಏಕೆಂದರೆ ಇದರಲ್ಲಿ ಒಂದು ತೊಟ್ಟು ನೀರು ಕೂಡ ಹರಿದಿರಲಲ್ಲ. ಆದ್ದರಿಂದ ಜನರು ಜಯಮಂಗಲಿಯನ್ನು ಮರೆತೇ ಹೋಗಿದ್ದರು. ಆದರೆ ಈ ವರ್ಷ ಬತ್ತಿ ಹೋಗಿದ್ದ ಜಯಮಂಗಲಿ ನದಿಯನ್ನು ನೋಡಿ ಜನರು ಆಶ್ಚರ್ಯಪಡುತ್ತಿದ್ದಾರೆ. ಏಕೆಂದರೆ ಬತ್ತಿ ಹೋಗಿ ಜೀವ ಕಳೆದುಕೊಂಡ ನದಿಗೆ ಮರಳಿ ಜೀವ ಬಂದಿದೆ. ಈ ಜಯಮಂಗಲಿಯು ತುಂಬಿ ತುಳುಕುತ್ತಿದೆ. ಈ ಜಯಮಂಗಲಿ ನದಿ ದೇವರಾಯನದುರ್ಗದಲ್ಲಿ ಹುಟ್ಟುತ್ತದೆ. ಇದಕ್ಕೆ ಈ ವರ್ಷದಲ್ಲಿ ಜೀವವು ಬಂದಿದೆ. ಈ ವರ್ಷ ಎಂದರೆ 2022 ಈ ವರ್ಷ ಜಯಮಂಗಲಿ ನದಿ ತುಂಬಿ ತುಳುಕುವಂತೆ ಮಾಡಿದೆ. ಜಯಮಂಗಲಿ ನದಿಯು 95 ವರ್ಷದಿಂದ ತುಂಬಿದೆ. ಇದು ಈ ವರ್ಷ ತುಂಬಿರುವುದರಿಂದ ಜನರಿಗೆ ಎಷ್ಟೋ ಆಶ್ಚರ್ಯ, ಅದ್ಭುತ, ಸಂತೋಷ, ದುಃಖ, ಇವೆಲ್ಲವನ್ನು ಕೂಡ ಈ ಜಯಮಂಗಲ ನದಿಯು ಈ ವರ್ಷ ತಂದು ಕೊಟ್ಟಿದೆ. ಆ ಜಯಮಂಗಲಿ ನದಿಯು ಜೀವ ಇಲ್ಲದ ಅದೆಷ್ಟೋ ಜೀವಿಗಳಿಗೆ ಜೀವವನ್ನು ಕೊಟ್ಟಿದೆ ಎಂದರೆ ತಪ್ಪಾಗಲಾರದು. ಏಕೆಂದರೆ ನಾವು ಹುಟ್ಟದೇ ಇರುವಾಗ ಇದು ತುಂಬುತಿತ್ತಂತೆ. ಆಗ ಆ ನೀರಿನ ರಭಸಕ್ಕೆ ಎರಡು ಪ್ರಾಣಗಳು ಬಲಿಯಾಗಿದ್ದವಂತೆ ಎಂದು ಹೇಳುತ್ತಿದ್ದರು. ಆದರೆ ಅದನ್ನು ನಮ್ಮ ಕಣ್ಣಾರೆ ಕಂಡಿರಲಿಲ್ಲ. ಆದರೆ ಈ ವರ್ಷ ನಮಗೆ ಸಂತೋಷವನ್ನು ಒತ್ತಿಯಾದ ಬತ್ತಿ ಹೋದ ನದಿಗೆ ಜೀವವನ್ನು ನೀಡಿದೆ. ಈ ವರ್ಷದ ಮಳೆ ಇನ್ನೂ ಈ ವರ್ಷದಲ್ಲಿ ನಡೆದ ಆಶ್ಚರ್ಯ, ಅದ್ಭುತ ಸಂತೋಷಗಳು ಮತ್ತು ದು:ಖಗಳು ಏನೆಂದರೆ.

ಈ ವರ್ಷ ಜಯಮಂಗಲ ನದಿ ತುಂಬಿ ಪಕ್ಕದಲ್ಲಿ ಇದ್ದ ಊರು ಗ್ರಾಮಗಳಲ್ಲಿ ನೀರು ನುಗ್ಗಿದ್ದು, ಇಡೀ ಗ್ರಾಮಕ್ಕೆ ನುಗ್ಗಿದೆ. ತುಮಕೂರು ಜಲ್ಲೆಯ ಚನ್ನಸಾಗರ ಎಂಬ ಗ್ರಾಮಕ್ಕೆ ಇಡೀ ಗ್ರಾಮಕ್ಕೆ ನೀರಿನ ಜಲದಿಗ್ಬಂದನ ಎಂದರೆ ಸುಳ್ಳಾಗಲಾರದು. ಏಕೆಂದರೆ ಈ ವರ್ಷ ವರುಣಾರ್ಭಟ ತುಂಬ ಹೆಚ್ಚಾಗಿದ್ದು, 40 ಕ್ಕೂ ಹೆಚ್ಚು ಮನೆಗಳಲ್ಲ ನೀರು ನುಗ್ಗಿದ್ದು, ಅವರ ಪರಿಸ್ಥಿತಿ ತುಂಬಾ ಘೋರವಾಗಿದ್ದು ಮತ್ತು 80- 100 ಎಕರೆಗಳಲ್ಲಿ ನೀರು ತುಂಬಿ ಇಡೀ ಬೆಳೆಯು ನಾಶವಾಗಿದ್ದು, ಜಯಮಂಗಳ ನದಿಯು ಈ ವರ್ಷ ಅಪಾಯದ ಮಟ್ಟ ಮೀರಿ ಹರಿಯುತ್ತಿದ್ದು, ಮತ್ತು ಶಾಲೆ ದೇವಸ್ಥಾನ ಹಾಲಿನ ಉತ್ಪಾದನಾ ಕೇಂದ್ರ ಇನ್ನು ಅನೇಕ ಸ್ಥಳಗಳು ಇಲ್ಲಿ ನೀರಿನಿಂದ ದಿಗ್ಬಂದನವಾಗಿದ್ದು, ಹಾಗೂ ಈ ನದಿಯು ಒಂದೇ ರಾತ್ರಿಯಲ್ಲಿ ತುಂಬಿ ಹರಿಯುತ್ತಿದ್ದು, ಹಾಗೂ ಗ್ರಾಮದಲ್ಲಿ ಅನೇಕ ನಷ್ಟಗಳು ಉಂಟಾಗಿದ್ದು, ದವಸಧಾನ್ಯಗಳು ನಾಶವಾಗಿದ್ದು ಹಾಗೂ ಮನೆಯಲ್ಲಿ ಸಿಕ್ಕಿಕೊಂಡವರನ್ನು ಅಗ್ನಿಶಾಮಕ ಸಿಬ್ಬಂದಿಯಿಂದ ಜನರ ರಕ್ಷಣೆಯನ್ನು ಮಾಡಿದ್ದರು. ಇನ್ನೂ

ಮಕ್ಕಳನ್ನು ರಾತ್ರಿ ರಾತ್ರಿಯೇ ಗ್ರಾಮಸ್ಥರು ಪಕ್ಕದ ಗ್ರಾಮಕ್ಕೆ ಕಳುಹಿಸಿದ್ದರು. ಜಿಲ್ಲಾಡಳತ, ಅಗ್ನಿಶಾಮಕ, ಪೊಲೀಸ್ ಠಾಣೆ ಈ ಮೂರು ಕ್ಷೇತ್ರಗಳು ಜನರನ್ನು ಗ್ರಾಮದಿಂದ ಹೊರತರಲು ಹೆಚ್ಚಾಗಿ ಪ್ರಯತ್ನಿಸಿದ್ದರು. ಹಾಗೂ ಈ ವರ್ಷ ವರುಣಾರ್ಭಟಕ್ಕೆ ಬೆಳೆನಾಶ, ದವಸ ಧಾನ್ಯಗಳು, ಮನೆ, ಶಾಲೆ ದೇಪಸ್ಥಾನ, ಹಾಲಿನ ಡೈರಿ ಇವುಗಳಗೆ ನೀರು ಸುಗ್ಗಿ ಇಡೀ ಗ್ರಾಮವೇ ದುಃಖಕ್ಕೆ ಮುಳುಗಿತ್ತು. ಆದರೆ ಈ ವರ್ಷ ಯಾವುದೇ ಪ್ರಾಣಹಾನಿ ಆಗಲಿಲ್ಲ. ಹಾಗೇ ಮಳೆ ಬಂದು ತುಂಬಿ ಹರಿಯುವ ವೇಳೆ ಗ್ರಾಮಸ್ಥರಿಗೆ ತುಂಬಾ ತೊಂದರೆಗಳು ಆಗುತ್ತವೆ. ಇದಕ್ಕೆ ಯಾವುದೇ ಶಾಶ್ವತ ಪರಿಹಾರ ಇದುವರೆಗೂ ಇಲ್ಲ.



ಜಯಮಂಗಲಿ ನದಿ ನೋಡುವವರ ಕಣ್ಣಿಗೆ ರೋಮಾಂಚನವನ್ನು ನೀಡಿದ್ದು, ಪ್ರವಾಸಿಗರಿಗೆ ಸಂತೋಷವನ್ನು ತುಂಬಿದೆ. 35 ವರ್ಷಗಳಂದ ತುಂಬದೇ ಇದ್ದ ನದಿ ಈ ವರ್ಷ ತುಂಜ ಹರಿಯುತ್ತಿರುವುದನ್ನು ನೋಡಿ ಪ್ರವಾಸಿಗರು ಖುಷಿಪಡುತ್ತಿದ್ದಾರೆ.

ಜಯಮಂಗಲಿ ನದಿಯು ದೇವರಾಯನದುರ್ಗದಲ್ಲಿ ಹುಟ್ಟುತ್ತೆ. ಇದು ಜಯ ಮತ್ತು ಮಂಗಳ ಅನ್ನೋ ಎರಡು ನದಿಗಳು ಒಟ್ಟಿಗೇ ಸೇರುವುದರಿಂದ ಇದನ್ನು ಜಯಮಂಗಳ ಎಂದು ಕರೆಯುತ್ತಾರೆ. ಈ ನದಿಗೆ ಸುವರ್ಣಮುಖ ಹಾಗೂ ಗರುಡಾಚಲ ಅನ್ನೋ ಎರಡು ಉಪ ನದಿಗಳು ಸೇರಿಕೊಳ್ಳುತ್ತವೆ. ಈ ನದಿಗಳು ಕೊರಟಗೆರೆ, ಮಧುಗಿರಿ, ಹುಲಿಕುಂಟೆ, ಆರ್. ವೆಂಕಟಾಪುರ, ಹೊಳೆವೆಂಕಟಾಪುರ ದಲ್ಲಿ ಹರಿದು ಗೌರಿಬಿದನೂರು ಮೂಲಕ ಪೆನ್ನಾ ನದಿಯನ್ನು ಸೇರುತ್ತದೆ. ಇದು ಪೆನ್ನಾರ್ ನದಿಯ ಉಪನದಿಯಾಗಿದೆ. ಹಾಗೂ ಈ ಪೆನ್ನಾರ್ ನದಿಯ ನೀರು ಪೆರೂರು ಡ್ಯಾಂ ಗೆ. ಈ ನೀರು ಸೇರುತ್ತವೆ ಎಂದು ಹೇಳುತ್ತಾರೆ. ಪೆರೂರು ಡ್ಯಾಂ ಇದು ಆಂಧ್ರಪ್ರದೇಶ ರಾಜ್ಯದಲ್ಲಿ, ಅನಂತಪುರ ಜಿಲ್ಲೆ, ಹಿಂದೂಪುರ ತಾಲ್ಲೂಕು ಅಲ್ಲಿ ಪ್ರವೇಶಿಸುತ್ತದೆ ಎಂಬುದನ್ನು ತಿಳಸುತ್ತಾರೆ.



ಜಯಪಮಂಗಲಿ ನದಿಯು ಈ ವರ್ಷ ಎಷ್ಟು ಆಶ್ಚರ್ಯ, ಅದ್ಭುತ ಹಾಗೂ ಸಂತೋಷ ಮತ್ತು ದುಃಖವನ್ನು ನೀಡಿದೆ ಎಂದರೆ ತಪ್ಪಾಗಲಾರದು. ಏಕೆಂದರೆ ಜೀವವಿಲ್ಲದ ನದಿಗೆ ಈ 95 ವರ್ಷದಿಂದ ಜೀವವಿಲ್ಲದ ನದಿಗೆ ಜೀವವನ್ನು ನೀಡಿದ್ದು, ಅದ್ಭುತವನ್ನು ತೋರುತ್ತದೆ. ಹಾಗೂ ಒಂದೇ ರಾತ್ರಿಯಲ್ಲಿ ಈ ನದಿಯು ತುಂಬಿದ್ದು, ಆಶ್ಚರ್ಯವನ್ನು ತೋರುತ್ತದೆ. ಹಾಗೂ ಪ್ರವಾಸಿಗರಿಗೆ ಎಷ್ಟೋ ಸಂತೋಷವನ್ನು ನೀಡುತ್ತಿದೆ. ಒಣಗಿ ಬತ್ತಿ ಹೋಗಿದ್ದ ಭೂಮಿಯಲ್ಲಿ ನೀರು ತುಂಬಿದ್ದು, ಎಷ್ಟೋ ಸಂತೋಷವನ್ನು ನೀಡುತ್ತದೆ. ಹೀಗೆ ಅಲ್ಲಿಯ ಗ್ರಾಮಸ್ಥರ ಮನೆ, ಬೆಳೆ, ದವಸ, ಧಾನ್ಯಗಳನ್ನು ನಾಶವಾಗಿ ಆ ಗ್ರಾಮಸ್ಥರಿಗೆ ದುಃಖವನ್ನು ನೀಡಿದೆ.

ಏನೇ ಆದರೂ ಬರಡು ಭೂಮಿಯಾದ ಈ ನದಿಗೆ ಜೀವವನ್ನು ತುಂಬಿದೆ.